# ಇ-ಟ್ರೇಡಿಂಗ್‌ನಿಂದಾಗಿ ರಾಜ್ಯ ರೈತರ ಆದಾಯ ಶೇ.38 ಹೆಚ್ಚಳ

## ಬೇಳೆ ಕಾಳು, ಕೊಬ್ಬರಿಗೆ ಉತ್ತಮ ಬೆಲೆ: ನೀತಿ ಆಯೋಗ

ನವದೆಹಲಿ: ಏಕೀಕೃತ ಮಾರುಕಟ್ಟೆ ವ್ಯವಸ್ಥೆಯಡಿ ಕರ್ನಾಟಕದ ರೈತರು ಇ-ಟ್ರೇಡಿಂಗ್ ಮೂಲಕ 2015-16ರಲ್ಲಿ ತಮ್ಮ ಕೃಷಿ ಉತ್ಪನ್ನಗಳಿಗೆ ಶೇ.38ರಷ್ಟು ಹೆಚ್ಚು ಬೆಲೆ ಪಡೆದಿದ್ದಾರೆ. ಏಕೀಕೃತ ಮಾರುಕಟ್ಟೆ ವೇದಿಕೆ (ಯುಎಂಪಿ)ಯನ್ನು ಕರ್ನಾಟಕ ಸರ್ಕಾರವು ಎನ್‌ಸಿಡಿಇಎಕ್ಸ್ ಎಂಬ ಇ-ಮಾರುಕಟ್ಟೆ ಕಂಪನಿಯ ಸಹಯೋಗದಲ್ಲಿ 2013-14ರಲ್ಲೇ ಜಾರಿಗೊಳಿಸಿತ್ತು. ಇದನ್ನೇ ಮಾದರಿಯಾಗಿಸಿಕೊಂಡು ಬಳಿಕ ಕೇಂದ್ರ ಸರ್ಕಾರ ಇ-ಟ್ರೇಡಿಂಗ್ ಜಾರಿಗೆ ತಂದಿತ್ತು.

➘ 10

# ಇ-ಟ್ರೇಡಿಂಗ್‌ನಿಂದಾಗಿ ರಾಜ್ಯ ರೈತರ ಆದಾಯ ಶೇ.38 ಹೆಚ್ಚಳ

ಮೊದಲ ಪುಟದಿಂದ

ಈ ಬಗ್ಗೆ 'ರೈತರ ಆದಾಯ ದ್ವಿಗುಣ' ಎಂಬ ವರದಿ ಸಿದ್ಧಪಡಿಸಿರುವ ಕೇಂದ್ರದ ನೀತಿ ಆಯೋಗ, 'ಯುಎಂಪಿಯನ್ನು ಇನ್ನೂ ದೇಶದಲ್ಲೆಡೆ ಸಂಪೂರ್ಣ ಜಾರಿಗೆ ತಂದಿಲ್ಲ. ಒಮ್ಮೆ ಜಾರಿಗೊಳಿಸಿದರೆ ಮಹತ್ತರ ರೈತರಿಗೆ ಉತ್ತಮ ಬೆಲೆ ಸಿಗುವಲ್ಲಿ ಮಹತ್ತರ ಬದಲಾವಣೆಗಳು ಆಗಲಿವೆ' ಎಂದಿದೆ.

'2013-14 ಹಾಗೂ 2015-16ರ ನಡುವಿನ ರೈತರ ಆದಾಯವನ್ನು ತುಲನೆ ಮಾಡಿ ನೋಡಿದಾಗ, ದೇಶದ ಇತರ ಸಗಟು ಪೇಟೆಗಳಿಗೆ ಹೋಲಿಸಿದರೆ ಕರ್ನಾಟಕದ ರೈತರು ಹೆಚ್ಚು ಬೆಲೆ ಪಡೆದಿರುವುದು ಕಂಡುಬಂದಿದೆ. ಸಾಮಾನ್ಯ ವರ್ಗದಲ್ಲಿ ಸರಾಸರಿ ಹೆಚ್ಚಳ ಶೇ.38 ಆದರೆ, ನೈಜ ವರ್ಗದಲ್ಲಿ ಶೇ.13 ಆಗಿದೆ. ಕಡಲೆ ಬೇಳೆ, ಹೆಸರು ಬೇಳೆ, ತೊಗರಿಬೇಳೆ, ಒಣಕೊಬ್ಬರಿಗೆ ಉತ್ತಮ ಬೆಲೆ ಬಂದಿದೆ' ಎಂದು ವರದಿ ಹೇಳಿದೆ.

ಪ್ರಸಕ್ತ ಕರ್ನಾಟಕದ 157 ಎಪಿಎಂಸಿ ಮಾರುಕಟ್ಟೆಗಳಲ್ಲಿ ಇ-ಟ್ರೇಡಿಂಗ್, ಇ-ಪರ್ಮಿಟ್, ಇ-ಪೇಮೆಂಟ್‌ನಂತಹ ಮೊದಲಾದ ಆಧುನಿಕ ವಹಿವಾಟು ವ್ಯವಸ್ಥೆಗಳಿವೆ. ದೇಶದ ಯಾವ ಭಾಗದಲ್ಲಿ ಉತ್ತಮ ಬೆಲೆ ಇದೆ ಎಂಬುದು ಈ ಎಪಿಎಂಸಿಗಳಿಗೆ ಅಂತರ್ಜಾಲದ ಮೂಲಕ ಮಾಹಿತಿ ಲಭ್ಯವಾಗುತ್ತದೆ. ಇದನ್ನು ಆಧರಿಸಿ ರೈತರು ಎಲ್ಲಿ ಉತ್ತಮ ಬೆಲೆ ಬರುವುದೋ ಅಲ್ಲಿಗೆ ಕೃಷಿ ಉತ್ಪನ್ನ ಮಾರಲು ಅವಕಾಶವಿದ್ದು, ಇದರಿಂದ ರೈತರಿಗೆ ಉತ್ತಮ ಬೆಲೆ ದೊರಕುತ್ತದೆ. ಜತೆಗೆ ನೇರ ವಹಿವಾಟು ನಡೆಸುವ ಕಾರಣ ದಲ್ಲಾಳಿಗಳ ಕಾಟವೂ ತಪ್ಪುತ್ತದೆ.

## ಏನೀ ವ್ಯವಸ್ಥೆ?

ಕರ್ನಾಟಕ ಸರ್ಕಾರ ಆರಂಭಿಸಿದ ಇ ಮಂಡಿ ವ್ಯವಸ್ಥೆಗೆ ದೇಶಾದ್ಯಂತ ಇರುವ ಎಲ್ಲಾ ಮಂಡಿಗಳನ್ನು ಆನ್‌ಲೈನ್ ಮೂಲಕ ಜೋಡಿಸಲಾಗಿದೆ. ಹೀಗಾಗಿ ಕರ್ನಾಟಕದ ಯಾವುದೇ ರೈತ ತನ್ನ ವ್ಯಾಪ್ತಿಯ ಮಂಡಿಗೆ ಆಗಮಿಸಿ ತನ್ನ ಉತ್ಪನ್ನಗಳನ್ನು ನೊಂದಾಯಿತ ಏಜೆನ್ಸಿ ಮೂಲಕ ಗುಣಪಟ್ಟ ಪರೀಕ್ಷಿಸಿಕೊಂಡು, ಅದನ್ನು ಹರಾಜಿಗೆ ಇಡಬಹುದು. ಈ ಗುಣಮಟ್ಟದ ಮಾಹಿತಿಯನ್ನು ಆನ್‌ಲೈನ್‌ನಲ್ಲಿ ಪಡೆಯುವ ದೇಶದಯಾವುದೇನೊಂದಾಯಿತ ವರ್ತಕ ಆನ್‌ಲೈನ್‌ನಲ್ಲೇ ಉತ್ಪನ್ನವನ್ನು ಖರೀದಿಸಬಹುದು. ಹೀಗೆ ಖರೀದಿಸಿದ ಉತ್ಪನ್ನಕ್ಕೆ ಆನ್‌ಲೈನ್‌ನಲ್ಲೇ ಹಣ ಪಾವತಿಸಬೇಕು. ಇಲ್ಲಿ ಮಧ್ಯವರ್ತಿಗಳ ಹಾವಳಿ ಇರುವುದಿಲ್ಲ. ಜೊತೆಗೆ ರೈತರ ಉತ್ಪನ್ನಕ್ಕೆ ಗರಿಷ್ಠ ಬೆಲೆ ಸಿಗುವ ಸಾಧ್ಯತೆ ನಿಚ್ಚಳವಾಗಿರುತ್ತದೆ.